ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 92/2017

(ಫ್ರಾಸಾ-6 ಚಾಸಾ-7)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 28.11.2024.

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರಕಾಶ್ |
| ತಂದೆಯ ಹೆಸರು | - | ನಾಗರಾಜ್ |
| ವಯಸ್ಸು | - | 37 ವರ್ಷ, |
| ಉದ್ಯೋಗ | - | ವ್ಯವಸಾಯ |
| ವಾಸ | - | ಮೆತ್ತಿಕೆರೆ ಶೆಟ್ಟಿಹಳ್ಳಿ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಮೃತ ಪ್ರಭು ನನಗೆ ಗೊತ್ತು. ಚಾಸಾ-2 ರಿಂದ 4 ಗೊತ್ತಿಲ್ಲ. ಚರಣ್ ನನಗೆ ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಈ ಹಿಂದೆ ನೋಡಿಲ್ಲ. ನಾನು ಐಶ್ವರ್ಯ ಬಾರ್ ಆಂಡ್ ರೆಸ್ಟೋರೆಂಟ್ ನಲ್ಲಿ ಈಗ ಸುಮಾರು 7 ವರ್ಷಗಳ ಹಿಂದೆ ಸಪ್ಲೈಯರ್ ಆಗಿ ಕೆಲಸ ಮಾಡುತ್ತಿದ್ದೆ. ಸದರಿ ಬಾರ್ ಬೆಳಗ್ಗೆ 9 ರಿಂದ ರಾತ್ರಿ 10 ಘಂಟೆಯವರೆಗೆ ತೆರೆದಿತ್ತು. ಚಾಸಾ-8 ಪ್ರಮೋದ್ ಆಗ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದರು. ನಾನು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್ ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

2. ದಿಃ29.12.2016 ರಂದು ಗ್ರಾಹಕರಿಗೆ ನಾನು ಪ್ರಮೋದ್ ಕೊಡುವ ಡ್ರಿಂಕ್ಸ್ ಅನ್ನು

ಕೌಂಟರಿನಲ್ಲಿ ಕುಳಿತುಕೊಂಡವರಿಗೆ ಕೊಡುತ್ತಿದ್ದೆ ಎಂದರೆ ಸಾಕ್ಷಿ ನಾನು ಆ ದಿನ ರಜೆ ಹಾಕಿದ್ದೆ ಎಂದು ಹೇಳುತ್ತಾರೆ. ಅದೇ ದಿನ ರಾತ್ರಿ 09.30 ಘಂಟೆಗೆ ಕೋಳಿ ಅಂಗಡಿ ಮಾಲೀಕರಾದ ನಾಗರಾಜ ಐಶ್ವರ್ಯ ಬಾರ್ ಆಂಡ್ ರೆಸ್ಟೋರೆಂಟ್ ನ ಮುಂಭಾಗದ ಬಾಗಿಲಿನಿಂದ ಬಂದು ಹಿಂದಿನ ಬಾಗಿಲು ಮುಖಾಂತರ ನಡೆದುಕೊಂಡು ಹೋದರು ಎಂದರೆ ನನಗೆ ಗೊತ್ತಿಲ್ಲ. ನಂತರ ಪ್ರಭು, ಮನೋಜ್ ಹಾಗೂ ಇನ್ನಿಬ್ಬರು ಬಾರ್ ಗೆ ಬಾರ್ ನೊಳಗೆ ರಾತ್ರಿ 09.45 ಘಂಟೆಗೆ ಬಾರ್ ಮುಂಭಾಗದಿಂದ ನಾಗರಾಜ್ ಕೋಳಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಹೇಮಂತ, ಥಳಿ ಮಂಗ, ಬರಾಜ, ಬೆಸ್ತಾಮನಹಳ್ಳಿ, ನೂರ್ ರವರು ಬಂದಿದ್ದು ಉಳಿದ ಮೂರು ಜನ ಹುಡುಗರಾದ ಮುಬಾರಕ್, ಸಂಜಯ್, ರಾಜು ಹಿಂಭಾಗದ ಬಾಗಿಲಿನಿಂದ ಕೈಗಳಲ್ಲಿ ಚಾಕು, ಡ್ರಾಗರ್ ಮತ್ತು ಮಚ್ಚನ್ನು ಹಿಡಿದುಕೊಂಡು ಬಂದಿದ್ದು ಅಂಡರ್ ಗ್ರೌಂಡ್ ಬಾಗಿಲಿನ ಹತ್ತಿರ ಬಿ ನಾಗರಾಜು ಬಂದು ನಿಂತು ಆತನ ಹುಡುಗರಿಗೆ ಆ ನನ್ನ ಮಗನಿಗೆ ಹೊಡೆಯಿರೋ ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ಆಗ ಮೃತ ಪ್ರಭುವಿಗೆ ಡ್ರಾಗರ್, ಮಚ್ಚು, ಚಾಕುಗಳಿಂದ ಹೊಡೆಯುತ್ತಿದ್ದರಿಂದ ನಾನು, ಮಂಚೇಗೌಡ ಮತ್ತು ಕ್ಯಾಶಿಯರ್ ಹೋಗಿ ಕೂಗಿಕೊಂಡಾಗ ಚಾಕು ಮತ್ತು ಡ್ರಾಗರ್ ಚುಚ್ಚಿ ಪ್ರಭು ರಕ್ತದ ಮಡುವಿನಲ್ಲಿ ಬಿದ್ದು ಸತ್ತು ಹೋದನು ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ "ದಿಃ29.12.2016 ರಂದು ಮಾಮೂಲಿಯಂತೆ ---------------------- ಅಲ್ಲಿದ್ದವರು ತಪ್ಪಿಸಿಕೊಂಡು ಓಡಿ ಹೋದರು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು. ಆರೋಪಿತರನ್ನು ನಾನು ಈ ಹಿಂದೆ ನೋಡಿರುತ್ತೇನೆ ಎಂದರೆ ಸರಿಯಲ್ಲ.

3. ನಾನು ಘಟನೆಯನ್ನು ನೋಡಿದ್ದರೂ ಸಹ ಹಾಗೂ ನಾನು ನಿಪಿ-8 ರಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಜೆ ವೈ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ,